## ಮಹಾಮಸ್ತಕಾಭಿಷೇಕದ ದಿನ ಸದ್ಧರ್ಮ ಬಂಧುಗಳು ಭಗವಂತನಿಗೆ ಅಭಿಷೇಕ ಮಾಡುವ ಕಲಶಗಳ ವಿವರ

| ಕ್ರ. ಸಂ. | ಕಲಶದ ಹೆಸರು | ಮೊತ್ತ ರೂ.ಗಳಲ್ಲಿ | ಸವಲತ್ತುಗಳು | |
|---|---|---|---|---|
| | | | 9ನೇ ದಿನ | ಇತರ ಸವಲತ್ತು |
| 1. | ಪ್ರಥಮ ಕಲಶ | 11,00,000-00 | 25 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 2. | ಶತಮಾನ ಕಲಶ | 5,00,000-00 | 20 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 3. | ರತ್ನಕಲಶ | 3,00,000-00 | 15 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 4. | ಅಮೃತ ಕಲಶ | 2,55,555-00 | 15 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 5. | ಸುವರ್ಣ ಕಲಶ | 1,11,111-00 | 6 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 6. | ರಜತ ಕಲಶ | 55,555-00 | 5 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ಭಾವಚಿತ್ರ |
| 7. | ಧವಳ ಕಲಶ | 25,555-00 | 4 ಪಾಸುಗಳು ಆಸನ ವ್ಯವಸ್ಥೆ | ಸ್ಮರಣ ಸಂಚಿಕೆಯಲ್ಲಿ ಹೆಸರು |
| 8. | ಶಾಂತಿ ಕಲಶ | 11,111-00 | 3 ಪಾಸುಗಳು ಆಸನ ವ್ಯವಸ್ಥೆ | - |
| 9. | ಜನಮಂಗಲ ಕಲಶ | 5,555-00 | 2 ಪಾಸುಗಳು ಆಸನ ವ್ಯವಸ್ಥೆ | - |
| 10. | ಭಕ್ತಿ ಕಲಶ | 2,555-00 | 2 ಪಾಸುಗಳು | - |

ಭಕ್ತಿ ಕಲಶಗಳು ಸೀಮಿತವಾಗಿದ್ದು, ಅವುಗಳನ್ನು ಆದ್ಯತೆಯ ಆಧಾರದಲ್ಲಿ ವಿತರಿಸಲಾಗುವುದು.

ಕೊನೆಯ ದಿನದ ಮಹಾಮಸ್ತಕಾಭಿಷೇಕದಂದು ಪೂರ್ಣ ಕುಂಭ, ಚತುಷ್ಕೋಣ ಕುಂಭ, ಎಳನೀರು, ಹಾಲು, ಇಕ್ಷುರಸ, ಕಲ್ಕಚೂರ್ಣ, ಅರಸಿನ, ಶ್ರೀಗಂಧ, ಚಂದನ, ಅಷ್ಟಗಂಧ ಇತ್ಯಾದಿಗಳಿಂದ ಭಗವಂತನಿಗೆ ಅಭಿಷೇಕ ಮಾಡುವ ಪುಣ್ಯಾವಕಾಶವನ್ನು ಹರಾಜಿನ ಮೂಲಕ ವಿತರಿಸಲಾಗುವುದು.

ಮುಂದಿನ ಜನವರಿ -ಫೆಬ್ರುವರಿಯಲ್ಲಿ ನಡೆಯಲಿರುವ ಈ ಶತಮಾನದ ಎರಡನೇ ಮಹಾಮಸ್ತಕಾಭಿಷೇಕದ ಈ ಪುಣ್ಯ ಪರ್ವದಲ್ಲಿ ಸರ್ವರೂ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ನಿವೇದಿಸಿಕೊಳ್ಳುತ್ತೇವೆ. ಈ ಬಗ್ಗೆ ನೇರವಾಗಿ ತಮ್ಮ ದೇಣಿಗೆಯನ್ನು ನೀಡುವ ಮಹನೀಯರು ವೇಣೂರಿನ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ನಂ.0150 2200076169 ಕ್ಕೆ ರವಾನಿಸಿ, ಈ ಐತಿಹಾಸಿಕ ಮಹತ್ವದ ಮಹಾ-ಉತ್ಸವದಲ್ಲಿ ತನು - ಮನ- ಧನಗಳ ನೆರವಿತ್ತು ಸಹಕರಿಸಬೇಕಾಗಿ ನಾಡಿನ ಎಲ್ಲಾ ಭವ್ಯಾತ್ಮರಾದ ಸದ್ಧರ್ಮ ಬಂಧುಗಳಲ್ಲಿ ವಿನಂತಿಸುತ್ತೇವೆ.

www.jainheritagecentres.com

**ಅಧ್ಯಕ್ಷರು ಮತ್ತು ಸದಸ್ಯರು**

ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಸಮಿತಿ, ವೇಣೂರು
Website: www.venur.in E-mail: mm@venur.in

ಪಾವನ ಮಾರ್ಗದರ್ಶನ
ಭಾರತ ಭೂಷಣ ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯ ಮಹಾಸ್ವಾಮಿಗಳು
ಶ್ರೀ ಜೈನ ಮಠ, ಮೂಡಬಿದ್ರಿ

ಅಧ್ಯಕ್ಷರು
ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಾಧಿಕಾರಿಗಳು ಶ್ರೀ ಕ್ಷೇತ್ರ ಧರ್ಮಸ್ಥಳ

ಸ್ಥಾಪಕ ವಂಶೀಯ ಅರಸರು ಮತ್ತು ಸ್ವಾಗತಾಧ್ಯಕ್ಷರು:
ತಿಮ್ಮಣ್ಣರಸರಾದ ಡಾ। ಪದ್ಮಪ್ರಸಾದ್ ಅಜಿಲರು
ಅಳದಂಗಡಿ ಅರಮನೆ

ಕಾರ್ಯಾಧ್ಯಕ್ಷರು:
ಶ್ರೀ ವಿ. ಧನಂಜಯ ಕುಮಾರ್

ಉಪಾಧ್ಯಕ್ಷರು:
ಶ್ರೀ ಡಿ. ಸುರೇಂದ್ರ ಕುಮಾರ್
ಶ್ರೀ ಕೆ. ಜಯವರ್ಮರಾಜ್ ಬಲ್ಲಾಳ್
ಶ್ರೀ ಎಂ. ಎಸ್. ರಾಜೇಂದ್ರ ಕುಮಾರ್
ಶ್ರೀ ಕೆ. ಅಭಯ ಚಂದ್ರ
ಶ್ರೀ ಡಿ. ಹರ್ಷೇಂದ್ರ ಕುಮಾರ್
ಶ್ರೀ [illegible]
ಶ್ರೀ ಎಂ. ಕೆ. ವಿಜಯಕುಮಾರ್
ಡಾ। ಬಿ. ಪಿ. ಇಂದ್ರ
ಡಾ। ಪಿ. ಶ್ರೀಧರ ಕಂಬಳಿ
ಶ್ರೀ ಎಮ್. ರಾಜೇಂದ್ರ
ಶ್ರೀ ಎಸ್. ಡಿ. ಸಂಪತ್ ಸಾಮ್ರಾಜ್ಯ
ಶ್ರೀ ಎಚ್. ಎಸ್. ಶೆಟ್ಟಿ
ಶ್ರೀ ಕೆ. ಸುರೇಶ್ ಬಲ್ಲಾಳ್

ಪ್ರಧಾನ ಕಾರ್ಯದರ್ಶಿ:
ಶ್ರೀ ಎ. ಗುಣಪಾಲ ಜೈನ್


ಕಾರ್ಯದರ್ಶಿಗಳು:
ಶ್ರೀ ಎಮ್. ವಿಜಯರಾಜ ಅಧಿಕಾರಿ
ಡಾ। ಕೆ. ರವೀಂದ್ರನಾಥ ಪ್ರಸಾದ್
ಶ್ರೀ ನವೀನ್‌ಚಂದ್ ಬಲ್ಲಾಳ್
ಶ್ರೀ ಅಶೋಕ್ ಅಜ್ರಿ
ಶ್ರೀ ಎಮ್. ಜೀಷ್ಮ ಪಡಿವಾಳ್

ಕೋಶಾಧಿಕಾರಿ:
ಶ್ರೀ ಬಿ. ರತ್ನವರ್ಮ ಇಂದ್ರ

ಮಂಜುಶ್ರೀ ಪ್ರಿಂಟರ್ಸ್, ಉಜಿರೆ

# ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಸಮಿತಿ

ವೇಣೂರು - 574 242, ದ.ಕ.
(ಕರ್ನಾಟಕ)
ದೂರವಾಣಿ - 08256 - 286488



ವೇಣೂರು
ಶ್ರೀ ಬಾಹುಬಲಿ ಮಹಾಮಸ್ತಕಾಭಿಷೇಕ -2012
28-1-2012 ರಿಂದ 5-02-2012ರ ವರೆಗೆ

# ಮನವಿ

॥ ಶ್ರೀ ವೀತರಾಗಾಯ ನಮಃ ॥

# ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಸಮಿತಿ


ವೇಣೂರು - 574 242, ದ.ಕ.
(ಕರ್ನಾಟಕ)
ದೂರವಾಣಿ - 08256 - 286488


## ಮನವಿ

ಸದ್ಧರ್ಮ ಬಂಧುಗಳೇ,

ಇಡೀ ವಿಶ್ವಕ್ಕೇ ತ್ಯಾಗ, ಅಹಿಂಸೆ, ಶಾಂತಿಯಂತಹ ಉನ್ನತ ಮೌಲ್ಯಗಳ ಮಹತ್ವವನ್ನು ಸಾರಿದ ಜೈನ ಧರ್ಮದ ಪರಂಪರೆಯಲ್ಲಿ ಪ್ರಥಮ ತೀರ್ಥಂಕರರ ಸುಪುತ್ರ ಹಾಗೂ ಪ್ರಥಮ ಮೋಕ್ಷಗಾಮಿಯಾದ ಭಗವಾನ್ ಶ್ರೀ ಬಾಹುಬಲಿಯ ಆರಾಧನೆಗೆ ಜೈನ ಇತಿಹಾಸದಲ್ಲಿ ಸಾವಿರಾರು ವರ್ಷಗಳ ಹಿನ್ನೆಲೆಯಿದೆ.

ಕರಾವಳಿ ಕರ್ನಾಟಕದ ಹಚ್ಚ ಹಸಿರಿನ ಸುಂದರ ಪ್ರಕೃತಿಯ ದಕ್ಷಿಣ ಕನ್ನಡ ಜಿಲ್ಲೆಯ ಮಲೆನಾಡಿನ ಸೆರಗಿನಲ್ಲಿ ಬೆಳ್ತಂಗಡಿ ತಾಲೂಕಿನ ವೇಣೂರು ಗ್ರಾಮದ ಫಲ್ಗುಣಿ ನದೀ ತೀರದಲ್ಲಿ ಉತ್ತರಾಭಿಮುಖವಾಗಿರುವ 35 ಅಡಿಗಳೆತ್ತರದ ಶ್ರೀ ಬಾಹುಬಲಿಯ ವಿಗ್ರಹವು ನಯನ ಮನೋಹರವಾದುದು. ಈ ಉನ್ನತ, ಮಂದಸ್ಮಿತ, ಏಕಶಿಲಾ ವಿಗ್ರಹವು ಧರ್ಮಾಸಕ್ತರನ್ನೂ, ಶಿಲ್ಪ ಕಲಾಸಕ್ತರನ್ನೂ ಏಕಪ್ರಕಾರವಾಗಿ ಆಕರ್ಷಿಸುವ ಒಂದು ಮಹತ್ವದ ಕೇಂದ್ರವಾಗಿದೆ.

### ಇತಿಹಾಸ ಹಿನ್ನೆಲೆ:

ತುಳುನಾಡಿನ ರಾಜ ಮನೆತನಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿರುವ ವೇಣೂರಿನ ಅಜಿಲ ವಂಶದ ನಾಲ್ಕನೇ ವೀರ ತಿಮ್ಮಣ್ಣಾಜಿಲ ಎಂಬ ಅರಸರು ಈ ಭಗವಾನ್ ಶ್ರೀ ಬಾಹುಬಲಿಯ ಮೂರ್ತಿಯನ್ನು 1604ರಲ್ಲಿ ಸ್ಥಾಪಿಸಿದರೆಂಬುದು ಐತಿಹಾಸಿಕ ಆಧಾರಗಳಿಂದ ತಿಳಿದು ಬಂದಿರುವ ವಿಚಾರವಾಗಿದೆ.

ವೇಣೂರಿನಲ್ಲಿ ಏಳು ಜಿನ ಬಸದಿಗಳೂ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನವೂ ಇದ್ದು ಧರ್ಮ ಸಹಿಷ್ಣುತೆಯ ಭಾರತೀಯ ಉನ್ನತ ಪರಂಪರೆಗನುಸಾರವಾಗಿ ಜೈನ ರಾಜ ಮನೆತನಗಳ ಸರ್ವಧರ್ಮ ಸಮನ್ವಯ ಮನೋಭಾವಕ್ಕೆ ಜ್ವಲಂತ ಸಾಕ್ಷಿಯಾಗಿವೆ. ಈ ಬಾಹುಬಲಿಯ ಮೂರ್ತಿಯ ಸ್ಥಾಪನೆ ಮಾಡಿದ ಅಜಿಲ ವಂಶದ ಇಂದಿನ ಅರಸರಾಗಿರುವ ತಿಮ್ಮಣ್ಣ ಅರಸರಾದ ಡಾ। ಪದ್ಮಪ್ರಸಾದ್ ಅಜಿಲರು ಈ ತೀರ್ಥ ಕ್ಷೇತ್ರದ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಕ್ರಿಯ ಮಾರ್ಗದರ್ಶನ ನೀಡುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

### ಮಹಾಮಸ್ತಕಾಭಿಷೇಕ - 2012

ಲೋಕಕಲ್ಯಾಣಾರ್ಥವಾಗಿ ಹಾಗೂ ಜನಸಮುದಾಯದಲ್ಲಿ ಧಾರ್ಮಿಕ ಪ್ರವೃತ್ತಿಯ ಸಂರಕ್ಷಣೆಗಾಗಿ ನಡೆಯುವ ಮಹಾಮಸ್ತಕಾಭಿಷೇಕವು ವೇಣೂರಿನಲ್ಲಿ 2000ನೇ ಇಸವಿಯಲ್ಲಿ ನಡೆದಿದ್ದು, ಇದೀಗ 21ನೇ ಶತಮಾನದ 2ನೇ ಮಹಾಮಸ್ತಕಾಭಿಷೇಕವಾಗಿ ಜರಗಲಿದೆ.

ಇಂದಿನ ದಿನಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಜೈನಧರ್ಮೀಯರಿಗೆ ಮಾರ್ಗದರ್ಶನ ನೀಡುತ್ತಿರುವ ಮಹಾನ್ ಆಚಾರ್ಯ ಪರಮಪೂಜ್ಯ ಶ್ರೀ ವಿದ್ಯಾನಂದ ಮುನಿ ಮಹಾರಾಜರ ಆಶೀರ್ವಾದಪೂರ್ವಕ ಈ ಮಹಾ ಮಸ್ತಕಾಭಿಷೇಕವು ಸಂಪನ್ನಗೊಳ್ಳಲಿದೆ.

ಈ ಮಹಾಪರ್ವವು ಶ್ರವಣಬೆಳಗೊಳದ ಜೈನಮಠದ ಕರ್ಮಯೋಗಿ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಶುಭಾಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಜರಗಲಿದೆ.

ವೇಣೂರು ಬಾಹುಬಲಿ ಕ್ಷೇತ್ರದ ಸೀಮೆಯ ಗುರುಪೀಠವಾಗಿರುವ ಮೂಡಬಿದ್ರಿ ಜೈನ ಮಠದ ಪರಮ ಪೂಜ್ಯ ಸ್ವಸ್ತಿಶ್ರೀ ಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಯವರ ಪಾವನ ಸಾನ್ನಿಧ್ಯ - ಮಾರ್ಗದರ್ಶನದಲ್ಲಿ ಈ ಮಹಾಭಿಷೇಕವನ್ನು ನಡೆಸಲಾಗುತ್ತದೆ.

ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿ ರಾಷ್ಟ್ರಮಟ್ಟದಲ್ಲಿ ಗೌರವಕ್ಕೆ ಪಾತ್ರರಾಗಿರುವ ಪದ್ಮಭೂಷಣ ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ವೇಣೂರು ಶ್ರೀ ದಿಗಂಬರ ಜೈನ ತೀರ್ಥಕ್ಷೇತ್ರ ಸಮಿತಿಯ ಅಧ್ಯಕ್ಷರಾಗಿದ್ದು ಈ ಮಸ್ತಕಾಭಿಷೇಕ ಸಮಿತಿಯನ್ನು ಅವರ ಅಧ್ಯಕ್ಷತೆಯಲ್ಲಿಯೇ ರೂಪಿಸಲಾಗಿದೆ.

2000ನೇ ಇಸವಿಯಲ್ಲಿ ನಡೆದ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಕಾರಣಕರ್ತರಾದ ವೇಣೂರಿನ ಹೆಮ್ಮೆಯ ಪುತ್ರ, ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಶ್ರೀ ವಿ. ಧನಂಜಯ ಕುಮಾರ್ ಅವರ ಕಾರ್ಯಾಧ್ಯಕ್ಷತೆಯಲ್ಲಿ ಈ ಮಹಾನ್ ಕಾರ್ಯವು ಪರಿಪೂರ್ಣಗೊಳ್ಳಲಿದೆ.

ಜೈನ ಸಮಾಜದಲ್ಲಿ ವಿವಿಧ ಸಾಧನೆ ಮಾಡಿರುವ ಗಣ್ಯರನ್ನು ಒಳಗೊಂಡ ಈ ಮಸ್ತಕಾಭಿಷೇಕ ಸಮಿತಿಯು ಈಗಾಗಲೇ ಕಾರ್ಯ ಪ್ರವೃತ್ತವಾಗಿದೆ.

### ಮಹಾಮಸ್ತಕಾಭಿಷೇಕ 2012ರ ವೈವಿಧ್ಯಪೂರ್ಣ ಪುಣ್ಯಕಾರ್ಯಗಳು

ಜನವರಿ 28ರಿಂದ 9 ದಿನಗಳ ಕಾಲ ನಡೆಯುವ ಈ ಮಹಾ ಉತ್ಸವದ ಆರಂಭದ 8 ದಿನಗಳ ಕಾರ್ಯಗಳನ್ನು ಸಮಾಜದ ಗಣ್ಯರೂ, 9ನೇ ದಿನದ ಮಹಾಮಸ್ತಕಾಭಿಷೇಕದ ಕಾರ್ಯಕ್ರಮವನ್ನು ಸಮಸ್ತ ಸದ್ಧರ್ಮ ಸಮಾಜ ಬಾಂಧವರೂ ನಡೆಸಿಕೊಡುವುದೆಂದು ಯೋಜಿಸಲಾಗಿದೆ.

ನಾಡಿನ ಎಲ್ಲಾ ದಿಗಂಬರ ಸಾಧು ಸಂತರ ಜೈನಮಠಗಳ ಪೂಜ್ಯ ಸ್ವಾಮೀಜಿಯವರುಗಳ ದಿವ್ಯ ಸಾನ್ನಿಧ್ಯದಲ್ಲಿ [illegible] ಪರಂಪರಾಗತ ವಿಧಿ-ವಿಧಾನಗಳಿಗನುಸಾರವಾಗಿ ನಡೆಯುವ ಈ ಮಸ್ತಕಾಭಿಷೇಕದಲ್ಲಿ ಪುಣ್ಯ-ಬಂಧದ ಅವಕಾಶವು ಸಮಾಜದ ಸಮಸ್ತ ಬಾಂಧವರಿಗೂ ಸಿಗುವಂತಾಗಬೇಕೆಂಬುದೇ ನಮ್ಮ ಆಶಯ.

ಧಾರ್ಮಿಕ ಸಭೆ - ಗೋಷ್ಠಿ - ಸಾಂಸ್ಕೃತಿಕಾದಿ ಕಾರ್ಯಕ್ರಮಗಳಲ್ಲಿ ನಾಡಿನ ಗಣ್ಯ ವಿದ್ವಾಂಸರು, ಕಲಾವಿದರು, ಸಾಹಿತಿಗಳು ಭಾಗವಹಿಸಲಿದ್ದು ಸಹೃದಯರಿಗೆ ಇದೊಂದು ರಸದೌತಣದ ದಿವ್ಯ ಮುಹೂರ್ತವಾಗಲಿದೆ.

### ಸ್ಮರಣ ಸಂಚಿಕೆ ಮತ್ತು ವಸ್ತುಪ್ರದರ್ಶನ

ಮಹಾಮಸ್ತಕಾಭಿಷೇಕದ ಈ ಸಂದರ್ಭವು ಅವಿಸ್ಮರಣೀಯವಾಗಿರುವಂತೆ ಸ್ಮರಣ ಸಂಚಿಕೆಯೊಂದನ್ನು ಹೊರತರಲು ಯೋಜಿಸಲಾಗಿದ್ದು ಇದರಲ್ಲಿ ನಾಡಿನ ಗಣ್ಯ ವಿದ್ವಾಂಸರು, ಸಾಹಿತಿಗಳು ಮತ್ತು ಲೇಖಕರ ಬರಹಗಳಿದ್ದು ಇದೊಂದು ಸಂಗ್ರಾಹ್ಯ ಗ್ರಂಥವಾಗಲಿದೆ. ಇದರಲ್ಲಿ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕೆಂದು ಧರ್ಮಬಂಧುಗಳನ್ನು, ವಾಣಿಜ್ಯೋದ್ಯಮಿಗಳನ್ನು ವಿನಂತಿಸುತ್ತಿದ್ದೇವೆ.

ಅದೇ ರೀತಿಯಲ್ಲಿ ಜನಸಮುದಾಯಕ್ಕೆ ಮಾಹಿತಿ ಮತ್ತು ಮನೋರಂಜನೆಯನ್ನು ಒದಗಿಸುವ ದೃಷ್ಟಿಯಿಂದ ರಾಜ್ಯಮಟ್ಟದ ವಸ್ತುಪ್ರದರ್ಶನವನ್ನು ಹಮ್ಮಿಕೊಳ್ಳಲಾಗುವುದು.

ಈ ಬೃಹತ್ ಸಮಾರಂಭವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುವಲ್ಲಿ ನಾಡಿನ ಉದ್ದ ಅಗಲದ ಧರ್ಮ ಬಂಧುಗಳೆಲ್ಲರೂ ಮುಕ್ತ ಹಸ್ತರಾಗಿ ತಮ್ಮ ತನು-ಮನ-ಧನಗಳ ಸಹಕಾರ ನೀಡುವರೆಂದು ನಾವು ಆಶಿಸುತ್ತೇವೆ.

ಈ ಪುಣ್ಯ ಕಾರ್ಯದಲ್ಲಿ ಸಹಕಾರ ನೀಡಲು ಬಯಸುವ ಭವ್ಯಾತ್ಮರಿಗೆ ದಾತೃಗಳ ಶ್ರೇಣಿಯನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

ವೇಣೂರು ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ
ಮಹಾಮಸ್ತಕಾಭಿಷೇಕ - 2012
ಮಹಾಮಸ್ತಕಾಭಿಷೇಕ ಸಮಿತಿಯ ಸದಸ್ಯತನ ಮತ್ತು ಅದರ ಸವಲತ್ತುಗಳು

| ಕ್ರ. ಸಂ. | ಸದಸ್ಯರ ವರ್ಗ | ಶುಲ್ಕ ರೂ.ಗಳಲ್ಲಿ | ಸವಲತ್ತುಗಳು | | |
|---|---|---|---|---|---|
| | | | ಎಲ್ಲಾ ದಿನ | 9ನೇ ದಿನ | ಇತರ ಸವಲತ್ತು |
| 1 | ಮಹಾ ಸಂರಕ್ಷಕರು | 1,00,001-00 | 6 ಪಾಸುಗಳ ಆಸನ ವ್ಯವಸ್ಥೆ | ರಜತ ಕಲಶದ ಅಭಿಷೇಕ | ಸ್ಮರಣ ಸಂಚಿಕೆಯಲ್ಲಿ ದಂಪತಿಗಳ ಭಾವಚಿತ್ರ |
| 2. | ಪ್ರಧಾನ ಸಂರಕ್ಷಕರು | 50,001-00 | 5 ಪಾಸುಗಳು ಆಸನ ವ್ಯವಸ್ಥೆ | ಧವಳ ಕಲಶದ ಅಭಿಷೇಕ | ಸ್ಮರಣ ಸಂಚಿಕೆಯಲ್ಲಿ ಭಾವಚಿತ್ರ |
| 3. | ಸಂರಕ್ಷಕರು | 25,001-00 | 4 ಪಾಸುಗಳು ಆಸನ ವ್ಯವಸ್ಥೆ | ಶಾಂತಿ ಕಲಶದ ಅಭಿಷೇಕ | ಸ್ಮರಣ ಸಂಚಿಕೆಯಲ್ಲಿ ಹೆಸರು |
| 4 | ಮಹಾ ಪೋಷಕರು | 10,001-00 | 3 ಪಾಸುಗಳು ಆಸನದ ವ್ಯವಸ್ಥೆ | ಜನಮಂಗಲ ಕಲಶದ ಅಭಿಷೇಕ | - |
| 5. | ಪೋಷಕರು | 5,001-00 | 2 ಪಾಸುಗಳು ಆಸನ ವ್ಯವಸ್ಥೆ | ಭಕ್ತಿ ಕಲಶದ ಅಭಿಷೇಕ | - |

www.jainheritagecentres.com
www.jainheritagecentres.com